ಕಾಲರಾ ಬೇನೆ ಪ್ರಾರಂಭವಾದಾಗ ಎಲ್ಲ ಕೈದಿಗಳು ಭಯಭೀತರಾದಂತೆ ಒಂದನೇ ವರ್ಗದ ಸ್ಥಾನಬದ್ಧರನ್ನು ಕಾಲರಾ-ಭಯ ಆವರಿಸಿತ್ತು. ಅವರೆಲ್ಲ ಸಂಜೆಯ ಊಟವನ್ನೇ ಬಿಟ್ಟಿದ್ದರು. ಆಪಾನನಿಃಸರಣದ ಸಂದರ್ಭದಲ್ಲಿಯೂ ಕಾಲರಾ ಬಂತೆಂದು ಭಯಾಕುಲರಾಗುತ್ತಿದ್ದರು. ರಾತ್ರಿ ಮಲಗುವಾಗ ಬೆಳತನಕ ಬದಕುವೆವೋ ಇಲ್ಲವೋ ಎಂಬ ಆರ್ದ್ಯೆರ್ಯದಿಂದ ಅರ್ಧನಿದ್ರೆಯಲ್ಲಿಯೇ ಮಲಗುತ್ತಿದ್ದರು. ರಾವ ಬಹಾದ್ದೂರ ಅಂಗಡಿಯವರಂತೂ ರಾತ್ರಿ ತಮಗೆ ಕಾಲರಾ ಆದರೆ ಏನು ಗತಿ ಎಂದು ಒಂದು ಬದಿಗೆ ಶ್ರೀ. ಅಧ್ಯಾಪಕರನ್ನೂ ಇನ್ನೊಂದು ಬದಿಗೆ ಶ್ರೀ. ವೆಂಕರಡಿಯವರನ್ನೂ ಮಲಗಿಸಿಕೊಂಡು ಕೈಗೆ ಕೈಕಟ್ಟಿಕೊಳ್ಳುತ್ತಿದ್ದರು. ಅಪ್ಪಿತಪ್ಪಿ ಆಪಾನನಿಃಸರಣವಾದರೆ ' ಅಧ್ಯಾಪಕರೇ, ಕಾಲರಾ ಬಂತು ! ವೆಂಕರಡಿಯವರೇ ಸತ್ತೆ ಸತ್ತೆ ! ' ಎಂದು ಗಾಬರಿಯಿಂದ ಚೀರುತ್ತಿದ್ದರು.

ಕಾಲರಾ ಬೇನೆ ಕಡಿಮೆ ಆಗಿ ಜೇಲಜೀವನವು ಎಂದಿನ ಸ್ಥಿತಿಗೆ ಬಂದಾಗ ದೇವರ ದಯದಿಂದ ಬದುಕಿದೆವೆಂದು ಎಲ್ಲ ಕೈದಿಗಳು ನಿಟ್ಟುಸಿರು ಬಿಟ್ಟರು. ಅನಂತರ ಜೇಲಿನ ನಿತ್ಯಕ್ರಮಗಳು ಯಥಾಪೂರ್ವ ಸಾಗತೊಡಗಿದವು.

ಶ್ರೀ ಚಿಪಕರ ಡಾಕ್ಟರರ ಫಜೀತಿ

ಶ್ರೀ ಚಿಪಕರ ಸಿವಿಲ್ ಸರ್ಜ್‌ನರು ತಮ್ಮ ಡಾಕ್ಟರೀ ವಿದ್ಯೆಯಲ್ಲಿ ಅನುಭವಿಕರಿದ್ದರು. ಆದರೆ ಹಳೇಪದ್ಧತಿಯ ರಾಜನಿಷ್ಠರಾದ್ದರಿಂದ ಕೈದಿಗಳಕೂಡೆ, ಅದರಲ್ಲಿಯೂ ಮೊದಲು ಮೊದಲು ಚಳವಳಿಯ ರಾಜಕೀಯ ಕೈದಿಗಳಕೂಡ ತಿರಸ್ಕಾರದಿಂದಲೇ ನಡೆಯುತ್ತಿದ್ದರು. ಅಲ್ಲದೆ ರೋಗಿಗಳ ರೋಗ ತಮಗೆ ತಗಲೀತೆಂಬ ಬಯದಿಂದ ಅವರು ಆವರಿಸಿದವರಾಗಿದ್ದರು. ರೋಗಿಯ ಮುಖದ ಕಡೆಗೆ ತಮ್ಮ ಮುಖ ಮಾಡಿ ಎಂದೂ ಪರೀಕ್ಷಿಸುತ್ತಿದ್ದಿಲ್ಲ. ರೋಗಿಯ ಶ್ವಾಸೋಚ್ಛ್ವಾಸ ತಮ್ಮ ಹೊಟ್ಟೆಯಲ್ಲಿ ಸೇರಬಾರದೆಂದು ಅವರು ಇಷ್ಟು ಮುಂಜಾಗ್ರತೆ ವಹಿಸುತ್ತಿದ್ದರು. ರೋಗಿಯ ಜ್ವರ ನೋಡುವಾಗ ಥರ್ಮಾಮೀಟರ ಹಚ್ಚಿದೆ ತಮ್ಮ ಕೈಯೊಳಗಿನ ಬಿಣದ ಬಡಿಗೆಯನ್ನು ಹಚ್ಚುತ್ತಾರೆಂದು ಬಹುಜನ ಕೈದಿಗಳ ತಕರಾರು ಇತ್ತು. ಇವೇ ಮುಂತಾದ ಕಾರಣಗಳ ಹಿನ್ನೆಲೆಯಲ್ಲಿ ಕಾಲರಾ ಸುರು ಆದಾಗ ಅದು ಬೇಗೆ ನಿಯಂತ್ರಣದಲ್ಲಿ ಬರುವಲಕ್ಷಣ ಕಾಣದಾದಾಗ ಒಂದು ದಿನ ಚಿಪಕರರು ಡೆಟಿನ್ಯೂ ಬರಾಕಿಗೆ ಬಂದು ತಿರುಗಿ ಹೋಗುವಾಗ ಶ್ರೀ ದತ್ತೋಪಂತ ಅಧ್ಯಾಪಕರು ಟಣ್ಣನೆ ಜಿಗಿದು ಅವರನ್ನು ಅಡ್ಡಗಟ್ಟಿ ಕೇಳಿದರು- "ಕಾಲರಾದಿಂದ ನಮ್ಮ ಜನ ಸಾಯುಹತ್ತಿದೆ. ನಿಮಗೆ

ಅದನ್ನು ನಿಯಂತ್ರಿಸುವದಾಗದಿದ್ದರೆ ಎಲ್ಲ ಕೈದಿಗಳನ್ನು ಹೊರಗೆ ಬಿಡಿರಿ. ನಮ್ಮ ಉಪಚಾರ ನಾವು ಮಾಡಿಕೊಳ್ಳುತ್ತೇವೆ. ಕೈದಿಗಳ ಜ್ವರ ನೋಡಲು ಥರ್ಮಾ ಮೀಟರದ ಬದಲು ಬಡಿಗೆ ಉಪಯೋಗಿಸಲಿಕ್ಕೆ ನಾಚಿಕೆ ಬರುವದಿಲ್ಲವೇ ನಿಮಗೆ? " ಎಂದು ಅರ್ಭಟಿಸುತ್ತ ಅವರನ್ನು ಹೊರಗೆ ಬಿಡದೆ ಅಡ್ಡಗಟ್ಟಿದರು. ಚಿಪಕರರು ಗಾಬರಿಯಾಗಿ ಶ್ರೀ. ಗಂಗಾಧರರಾಯರ ಮೊರೆಹೊಕ್ಕಾಗ ಅಧ್ಯಾಪಕರು ಹಿಂದೆ ಸರಿದರು. ಚಿಪಕರರು ಜೀವ ಉಳಿಯಿತೆಂದು ಉಸಿರುಬಿಟ್ಟು ಲಗುಬಗೆಯಿಂದ ಹೊರಗೆ ಹೋದವರು ತಿರುಗಿ ಡೆಟಿನ್ಯು ಬರಾಕಿಗೆ ಎಂದೂ ಬರಲಿಲ್ಲ.

ಮತ್ತೊಂದು ದಿನ ಶ್ರೀರಂಗ ಕಾಮತರು ಜೇಲಿನಲ್ಲಿಯ ಹಾಸ್ಪಿಟಲಕ್ಕೆ ಹೋಗಿದ್ದರು. ಆಗ ಅವರು ಗಡ್ಡ ಬೆಳಿಸಿದ್ದರು. ದವಾಖಾನೆಯಲ್ಲಿ ಶ್ರೀ ಚಿಪಕರರು ಬರುತ್ತಲೆ ಇವರು ಅವರಿಗೆ ದಾರಿ ಬಿಡಲಿಲ್ಲ. ಆಗ ಚಿಪಕರರು ,''ಹೂ ಅರ್ ಯೂ?'' (ನೀನು ಯಾರು) ಎಂದು ಜಬರಿಸಿದರು. ಕೂಡಲೆ ಶ್ರೀರಂಗ ಕಾಮತರು ಅವೇ ಶಬ್ದಗಳಿಂದ ಅವರಿಗೆ '' ಹೂ ಆರ್ ಯೂ ? " ಎಂದು ಮರುಪ್ರಶ್ನೆ ಹಾಕಿದಾಗ ಚಿಪಕರರು "ಗೆಟೌಟ " (ಹೊರಗೆ ಹೋಗು) ಎಂದು ಬೆದರಿಸಿದರು. ಆಗ ಶ್ರೀರಂಗ ಕಾಮತರು ತಿರುಗಿ 'ಯೂ ಗೆಟೌಟ' (ನೀನೇ ಹೊರಗೆ ಹೋಗು) ಎಂದು ಪ್ರತಿಯಾಗಿ ಅವರಿಗೆ ಹೇಳಿದಾಗ ಪ್ರಕರಣ ಇನ್ನು ವಿಕೋಪಕ್ಕೆ ಹೋಗುವದೆಂದು ಗಾಬರಿಯಾಗಿ ಚಿಪಕರರು ಸುಮ್ಮನೆ ಅಫೀಸಿಗೆ ಹೊರಟು ಹೋದರು. ಮರುದಿನ ಚಿಪಕರರು ಶ್ರೀ ನಾರಾಯಣರಾವ ಜೋಶಿಯವರಿಗೆ ನಡೆದ ಸಂಗತಿ ತಿಳಿಸಿ "ನಿಮ್ಮ ಜನರು ನನ್ನ ಅಪಮಾನ ಮಾಡುತ್ತಾರೆ. ನನ್ನನ್ನು ಅವರು ಹೊಡೆಯುವಂತೆ ಕಾಣುತ್ತದೆ. ನೀವು ಸ್ವಲ್ಪ ವಿಚಾರಿಸಿರಿ" ಎಂದು ಬಿನ್ನವಿಸಿಕೊಂಡರು. " ಸಂಣ ಹುಡುಗರ ಮಾತಿಗೆ ನಿಮ್ಮಂಥ ದೊಡ್ಡವರು ಲಕ್ಷ್ಯ ಕೊಡಬಾರದು. ನಾನು ಶ್ರೀರಂಗ ಕಾಮತರಿಗೆ ಹೇಳುತ್ತೇನೆ" ಎಂದು ಶ್ರೀನಾರಾಯಣರಾಯರು ಚಿಪಕರರಿಗೆ ಸಮಾಧಾನ ಹೇಳಿದ ಮೇಲೆ ಅಲ್ಲಿಗೇ ಎಲ್ಲ ಮುಗಿಯಿತು. ಮರುದಿನ ಶ್ರೀ ಚಿಪಕರರು ದವಾಖಾನೆಗೆ ಬಂದು ಶ್ರೀರಂಗ ಕಾಮತರನ್ನು ಕರೆಯಿಸಿ ಅವರಿಗೆ ದಿನಾಲು ೪ ಪೌಂಡು ಹಾಲು ೨ ಪೌಂಡು ಬ್ರೆಡ್ ಕೊಡಬೇಕೆಂದು ಬರೆದು ಬಿಟ್ಟರು. ಬಹಳಷ್ಟು ಜನರು ಬೇರೆ ಜೇಲಿಗೆ ಮತ್ತು ಕಿಲ್ಲೆ ಜೇಲಿಗೆ ಹೋದಮೇಲೆ ನಾನು (ಅಂಣುಗುರೂಜಿ) ಹಿಂಡಲಗಿ ಜೇಲಿಗೆ ೧೯೪೩ ಇಸವಿಯ ಬೇಸಿಗೆಯಲ್ಲಿ ಬಂದೆ ಆಗ ಇದೇ ಚಿಪಕರರು ಚೀಫ ಮೆಡಿಕಲ್ ಆಫೀಸರರಾಗಿದ್ದರು. ಅವರು ನನ್ನ ಮೇಲೆ ಅದೇಕೋ ವಿಶೇಷ ಪ್ರೀತಿ ಮಾಡುತ್ತಿದ್ದರು. ನನ್ನನ್ನು ಒಂದು ದಿನ ಅವರು ಕರೆದು ದವಾಖಾನೆಯಲ್ಲಿ ಕೂಡಿಸಿಕೊಂಡು ಹೇಳಿದರು– " ಅಂಣು ಗುರೂಜಿಯವರೇ ನೀವು ನಿಜವಾದ ಗಾಂಧಿ ಅನುಯಾಯಿಗಳಾಗಿರುವಿರಿ. ಈ ವರೆಗೆ ನಿಮ್ಮ ಜನರು ನನಗೆ ಬಹಳ ತ್ರಾಸಕೊಟ್ಟರು. ನಾಯಿಯಂತೆ ನನ್ನನ್ನು ನಡೆಸಿಕೊಂಡರು,

ಅದೆಲ್ಲ ಹೋಗಲಿ. ನೀವು ಜೇಲಿನಲ್ಲಿರುವವರೆಗೆ ನೀವು ಶಿಫಾರಸು ಮಾಡುವ ನಿಮ್ಮ ರಾಜಕೀಯ ಕೈದಿಗಳಿಗೆ ನೀವು ಹೇಳಿದಷ್ಟು ಬ್ರೆಡ್ ಹಾಲು ಕೊಡುತ್ತೇನೆ'' ಎಂದು ಅಂದರಷ್ಟೇ ಅಲ್ಲ. ಆ ವಚನದಂತೆ ಕಡತನಕ ನಡೆದರು. ಆವರು ಕೊಟ್ಟ ಆಶ್ವಾಸನೆಯ ದುರುಪಯೋಗವನ್ನು ನಾನು ಎಂದೂ ಮಾಡಲಿಲ್ಲ. ಅವಶ್ಯವಿದ್ದವರಿಗಷ್ಟೇ ಹಾಲು ಬ್ರೆಡ್ ಕೊಡಿಸಿದೆ. ನಾನು ನನ್ನ ಸ್ವಂತಕ್ಕೆ ಎಂದೂ ಬ್ರೆಡ್ ಹಾಲು ತಕ್ಕೊಳ್ಳಲಿಲ್ಲ. ಶ್ರೀ. ಚಿಪಕರರ ಮೇಲೆ ಅದರ ಪರಿಣಾಮ ಬಹಳವಾಗಿ ನಾನು ಬಿಡುಗಡೆಯಾಗಿ ಬಂದ ಮೇಲೆಯೂ ಅವರು ಬೆಳಗಾವಿಯಲ್ಲಿ ಇರುವ ವರೆಗೆ ನಮ್ಮಿಬ್ಬರ ಸ್ನೇಹ ಅತಿ ನಿಕಟವಾಗಿ ಉಳಿಯಿತು.

ಸತ್ತಿ ರಾವಜೆಪ್ಪನವರ ಗತ್ತು.

ಜೇಲಿನಲ್ಲಿ ಕಾಲರಾ ಉಗ್ರರೂಪದಲ್ಲಿದ್ದಾಗ ದೊಡ್ಡ ದೊಡ್ಡ ಜನರೆಲ್ಲ ಹೆದರಿ ಹೋಗಿದ್ದರು. ತಮ್ಮ ಮೇಲೆ ವಿನಾಕಾರಣವಾಗಿ ಅಪವಾದ ತಕ್ಕೊಳ್ಳಬಾರದೆಂದು ಸರ ಕಾರ ಯೋಚಿಸಿ ಮುದುಕರನ್ನೂ ಅಶಕ್ತರನ್ನೂ ಬಿಡುಗಡೆ ಮಾಡುವಂತೆ ಸಿವಿಲ್ ಸರ್ಜನರಿಗೆ ಅಧಿಕಾರ ಕೊಟ್ಟರು. ಈ ಸಂಗತಿ ಸತ್ತಿಯ ರಾವಜೆಪ್ಪ ಕುಲಕರ್ಣಿಯವರಿಗೆ ತಿಳಿಯಿತು. ಅವರು ಗಂಗಾಧರರಾವ ದೇಶಪಾಂಡೆಯವರ ಲಂಗೋಟಿ ವಿತ್ರರೂ ಆಗರ್ಭ ಶ್ರೀಮಂತರೂ ಕಟ್ಟಾ ಕಾಂಗ್ರೇಸಿಗರೂ ಆಗಿದ್ದರು. ಪೋಲೀಸರು ಇವರನ್ನೂ ಆಗಸ್ಟ ೮–೯ ನೇ ತಾರೀಖಿಗೆ ಬಂಧಿಸಿ ಹಿಂಡಲಗಿ ಜೇಲಿನಲ್ಲಿ ಸ್ಥಾನಬದ್ಧರನ್ನಾಗಿಟ್ಟಿದ್ದರು. ಅವರಿಗೆ ತುಂಬಾ ವಯಸ್ಸೂ ಆಗಿತ್ತು. ಕಾಲರಾದ ಉಗ್ರತನಕ್ಕೆ ಹೆದರಿ ಬಿಡುಗಡೆಯಾಗಿ ಹೋಗುವ ಯುಕ್ತಿ ಹುಡಕಹತ್ತಿದರು. ಶ್ರೀ. ಚಿಪಕರರು ಶಿಫಾರಸು ಮಾಡಿದರೆ ಬಿಡುಗಡೆ ಯಾಗುವದೆಂಬದನ್ನು ಅವರು ತಿಳಿದಿದ್ದರು. ಒಂದು ದಿನ ಮುಂಜಾನೆ ಚಿಪಕರ ಸರ್ಜನರು ಅವರ ಬರಾಕಿಗೆ ಬಂದಾಗ ಮೆಲ್ಲಗೆ ಅವರನ್ನು ಬದಿಗೆ ಕರೆದು ತನ್ನ ಬಿಡುಗಡೆಯ ರಿಪೋರ್ಟು ಮಾಡಬೇಕೆಂದೂ ಅದಕ್ಕಾಗಿ ತಾನು ಎರಡು ನೂರು ರೂಪಾಯಿ ಕೊಡುವವಾಗಿಯೂ ಅವರ ಕಿವಿಯಲ್ಲಿ ಹೇಳಿದರು. ಎರಡು ನೂರು ರೂಪಾಯಿ ಎಂದು ಹೇಳುವಾಗ ಸಂಕೇತವಾಗಿ ಎರಡು ಬೊಟ್ಟುಗಳನ್ನು ಮಾಡಿದ್ದರು. ಇದನ್ನು ಕೇಳಿದ ಚಿಪಕರರು ಕೂಡಲೇ ಗಂಗಾಧರರಾಯರ ಕಡೆಗೆ ಹೋಗಿ ನಡೆದ ಸಂಗತಿಯನ್ನೆಲ್ಲ ತಿಳಿಸಿದರು. ಆಗ ಗಂಗಾಧರರಾಯರು ಶ್ರೀ. ರಾವಜೆಪ್ಪನವರನ್ನು ಕರೆದು "ಏನು ರಾವಜಿ, ನೀನು ನಿನ್ನ ಬಿಡುಗಡೆಗಾಗಿ ಎರಡು ನೂರು ರೂಪಾಯಿ ಕೊಡುವಿಯೋ? '' ಎಂದು ಚಿಪಕರರ ಸಮ್ಮುಖದಲ್ಲಿಯೇ ಪ್ರಶ್ನೆ ಹಾಕಿದರು. ಆಗ ರಾವಜೆಪ್ಪನವರು "ನಾನೇನು ಮೂರ್ಖನೋ, ನಿಮ್ಮನ್ನೆಲ್ಲ ಇಲ್ಲಿ ಬಿಟ್ಟು ಹೊರಗೆ ಹೋಗಲು ನನಗೆ ಬುದ್ಧಿಯಿಲ್ಲವೇ? ಚಿಪಕರರು ಹೇಳುವದೆಲ್ಲ ಶುದ್ಧ ಸುಳ್ಳು. ನಾನು ಎರಡು ಬೊಟ್ಟು ಮಾಡಿದ್ದು ನಿಜ. ಆದರೆ ಎರಡು ಬೊಟ್ಟು ಅಂದರೆ ಎರಡು ನೂರು ರೂಪಾಯಿಯೆಂದು ಈ ಮೂರ್ಖ ಚಿಪಕರರು ತಿಳಿಕೊಂಡರೆ ನಾನೇನು ಮಾಡಲಿ ? ನಾನು ಎರಡು ಬೊಟ್ಟು ಮಾಡಿದ್ದು

ಶೌಚಕ್ಕೆ ಆಗಹತ್ತಿದೆ. ಔಷಧಿಕೊಡಿರೆಂದು ಹೇಳುವದಕ್ಕಾಗಿ ಮಾತ್ರ'' ಎಂದು ಚಾಣಾಕ್ಷ. ತನದಿಂದ ಮಾತು ತಿರುವಿದಾಗ ಎಲ್ಲರೂ ಬಿದ್ದು ಬಿದ್ದು ನಕ್ಕರು.

ಜೇಲ ಸುಪರಿಂಟೆಂಡೆಂಟರಿಗೆ ಪಾದರಕ್ಷೆಯ ಪ್ರಸಾದ!

ಕಿಲ್ಲೆ ಸಬ್ ಜೇಲಿನಲ್ಲಿಯೂ ಐದಾರು ನೂರು ರಾಜಕೀಯ ಕೈದಿಗಳಿದ್ದರು. ಸ್ಥಳ ತುಂಬಿಹೋಗಿತ್ತು. ಸ್ನಾನಕ್ಕೆ ನೀರಿಲ್ಲ. ದುರ್ಗಂಧಮಯ ವಾತಾವರಣ. ಸರಿಯಾದ ಊಟವಿಲ್ಲ. ರಾತ್ರಿ ಮಲಗಿದರೆ ತಗಣಿ, ಚಿಕ್ಕಾಡು ಗುಂಗಾಡುಗಳ ವಿಪರೀತ ಕಾಟ, ಮೈಕೆರೆದು ಕೆರೆದು ಮೈತುಂಬ ಗಾದೆಗಳು. ಇದನ್ನು ಸುಧಾರಿಸಬೇಕೆಂದು ನಮ್ಮ ಜನರು ಮೇಲಧಿಕಾರಿಗಳಿಗೆ ಎಷ್ಟೇ ತಿಳಿಸಿ ಹೇಳಿದರೂ ಪ್ರಯೋಜನವಾಗಲಿಲ್ಲ. ಚಿಕ್ಕೋಡಿ ತಾಲೂಕಿನ ಬೋರಗಾವಿಯ ಡಾಕ್ಟರ ಟೋಳ ಎಂಬವರು ಇದೇ ಕಿಲ್ಲೆ ಜೇಲಿನಲ್ಲಿ ಡೆಟಿನ್ಯು ಆಂತ ಇದ್ದರು. ದಮ್ಮಿನ ಪ್ರಕೃತಿಯ ಬಡಕ ಆಶಕ್ತ ಗ್ರಹಸ್ಥರಿವರಾಗಿದ್ದರು. ದೇಶಭಕ್ತಿ ಮತ್ತು ಅನ್ಯಾಯದ ವಿರುದ್ಧ ಕಿಡಿಕಿಡಿಯಾಗಿ ಕೂಡಲೆ ಅಹಿಂಸೆ ಹಿಂಸೆಯ ವಿಚಾರ ಮಾಡದೆ ಸ್ವತಃ ತಾವೇ ಕ್ರಮ ತೆಗೆದುಕೊಳ್ಳುವದು ಅವರ ಸ್ವಭಾವ ವಾಗಿತ್ತು. ಜನಸೇವೆಯೆಂದರೆ ಜನಾರ್ದನನ ಸೇವೆಯೆಂದು ನಂಬಿದ ಇವರು ಬಹಳೇ ಸಿಟ್ಟಿನ ಸ್ವಭಾವದವರಾಗಿದ್ದರು. ತಾಳ್ಮೆ ಸಹನಶೀಲತೆ ಕಡಿಮೆ. ಎಷ್ಟು ಹೇಳಿದರೂ ಬಿನ್ನ ವಿಸಿದರೂ ಜೇಲಿನಲ್ಲಿಯ ಅಸ್ವಚ್ಛತೆ, ದುರ್ಗಂಧ ಕಡಿಮೆಯಾಗದ್ದನ್ನು ಕಂಡು ಇವರು ಉಗ್ರರೂಪ ತಾಳಿದರು. ಸೋಮವಾರ ವಾಡಿಕೆಯಂತೆ ಜೇಲ ಸುಪರಿಂಟೆಂಡೆಂಟರಾದ ಲ್ಯಾಕಸ್ಟನ್ ಸಾಹೇಬನು ಇನಸ್ಪೆಕ್ಶನ್ನಿಗೆ ಬಂದಾಗ ಕೈದಿಗಳು ಸಾಲಾಗಿ ನಿಂತಿದ್ದರು. ಸುಪರಿಂಟೆಂಡೆಂಟರ ರಕ್ಷಣೆಗಾಗಿ ಯಾವಾಗಲೂ ೪-೫ ಪೋಲೀಸರು ದಂಡಾ ಹಿಡಿದು ಸಜ್ಜಾಗಿಯೇ ಅವರ ಗೂಡ ಇರುತ್ತಿದ್ದರು. ಸುಪರಿಂಟೆಂಡೆಂಟರು ಡಾಕ್ಟರ ಟೋಳರ ಮುಂದೆ ಬಂದಾಗ ಜೇಲಿನ ಅವ್ಯವಸ್ಥೆಯ ಬಗ್ಗೆ ಡಾಕ್ಟರ ಟೋಳರು ತಕರಾರು ಮಾಡಿದರು. ಆಗ ಸಾಹೇಬರು ಉದ್ದಟತನದಿಂದ ಏನೋ ಉತ್ತರ ಕೊಟ್ಟರು. ಡಾ. ಟೋಳರಿಗೆ ಆದು ಸಹನವಾಗದೆ ತತ್‌ಕ್ಷಣ ಕಾಲಲ್ಲಿಯ ಚಪ್ಪಲಿ ತೆಗೆದು ಕೈಯಲ್ಲಿ ಹಿಡಿದು ಫಟ್ ಫಟ್ ಎಂದು ಎರಡು ಪೆಟ್ಟುಗಳನ್ನು ಸಾಹೇಬರ ಕೆನ್ನೆಗೆ ಹೊಡೆದೇ ಬಿಟ್ಟರು ! ಒಮ್ಮೆಲೆ ಗಡಿಬಿಡಿ ಎದ್ದಿತು. ಭಯಸೂಚಕ ಗಂಟೆ ಪೋಲೀಸರ ಸೀಟಿ ಬಾರಿಸಹತ್ತಿದವು. ಹತ್ತಿಪ್ಪತ್ತು ಪೋಲೀಸರು ಧಾವಿಸಿ ಬಂದು ಡಾ. ಟೋಳರನ್ನು ಮುತ್ತಿ ದಂಡದಿಂದ ಹೊಡೆಯ ಹತ್ತಿದರು. ದನಗಳೂ ಈ ಪೆಟ್ಟು ತಾಳದಂತಿತ್ತು. ಕೈಯ್ಕೊಳ್ಳಗಿನ ದಂಡಾ ಮುರಿಯುವವರೆಗೆ ಈ ಪೋಲೀಸರೆಲ್ಲ ಕೂಡಿ ಡಾ. ಟೋಳರನ್ನು ಬಡೆದರು. ತಲೆ ಒಡೆಯಿತು. ಮೈಯೆಲ್ಲ ರಕ್ತ ಬಂಬಾಳವಾಯಿತು. ಆದರೇನು ಪ್ರತಿಪೆಟ್ಟಿಗೂ